158ನೇ ಮಾ.ಉ SL.No:-14 10.03.26

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಎಫ್. ಹೆಚ್. ಜಕ್ಕಪ್ಪನವರ, ಇವರು ನೀಡಿರುವ ಶೂನ್ಯ ವೇಳೆ ಪ್ರಶ್ನೆಯ ಮೇಲಿನ ಹೇಳಿಕೆ.**

**ಪ್ರಶ್ನೆ:** ಧಾರವಾಡ ಜಿಲ್ಲೆಯ ಅಣ್ಣಿಗೇರಿ ತಾಲ್ಲೂಕಿನ ನಾವಳ್ಳಿ ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿನ ನಾವಳ್ಳಿ ಗ್ರಾಮದ ಹತ್ತಿರ ಹರಿಯುವ ಈ ಹಂದಿಗನ ಹಳ್ಳಕ್ಕೆ ನಾವಳ್ಳಿ, ಕುರಹಟ್ಟಿ, ಅಡ್ನೂರು ಮತ್ತು ಕಿತ್ತೂರು ಗ್ರಾಮಗಳ ಶೌಚಾಲಯದ ವಿಷಪೂರಿತ ನೀರು ನೇರವಾಗಿ ಸೇರುತ್ತಿದೆ. ಇದರಿಂದಾಗಿ ಹಳ್ಳದ ನೀರಿನಲ್ಲಿ ಅಪಾಯಕಾರಿ 'ಕೋಲಿಫಾರ್ಮ್' (Coliform) ಬ್ಯಾಕ್ಟೀರಿಯಾಗಳು ಉತ್ಪತ್ತಿಯಾಗುತ್ತಿವೆ. ಈ ಕಲುಷಿತ ನೀರು ಅಂತರ್ಜಲವನ್ನು ಸೇರುತ್ತಿರುವುದರಿಂದ ಗ್ರಾಮದ ಕುಡಿಯುವ ನೀರಿನ ಕೊಳವೆಬಾವಿಗಳೂ ಸಹ ವಿಷಪೂರಿತವಾಗುತ್ತಿವೆ. ಇದರಿಂದ ಈ ಭಾಗದ ಜನರ ಆರೋಗ್ಯದ ಮೇಲೆ ತೀವ್ರ ತರಹದ ಪರಿಣಾಮಗಳು ಉಂಟಾಗುತ್ತಿದ್ದು, ಸಾಂಕ್ರಾಮಿಕ ರೋಗಗಳ ಭೀತಿ ಎದುರಾಗಿದೆ.

ಆದ್ದರಿಂದ ಸರ್ಕಾರವು ಈ ಕೂಡಲೇ ಮಧ್ಯ ಪ್ರವೇಶಿಸಿ ಹಂದಿಗನ ಹಳ್ಳಕ್ಕೆ ಸೇರುತ್ತಿರುವ ಶೌಚಾಲಯದ ನೀರನ್ನು ತಡೆಗಟ್ಟಲು ಮತ್ತು ಕಲುಷಿತ ನೀರನ್ನು ಶುದ್ಧೀಕರಿಸಲು ವೈಜ್ಞಾನಿಕ ಕ್ರಮಗಳನ್ನು ಕೈಗೊಳ್ಳಬೇಕು. ಈ ಮೂಲಕ ನಾವಳ್ಳಿ ಮತ್ತು ಸುತ್ತಮುತ್ತಲಿನ ಗ್ರಾಮಸ್ಥರಿಗೆ ಶುದ್ಧ ಕುಡಿಯುವ ನೀರು ಹಾಗೂ ಉತ್ತಮ ಆರೋಗ್ಯ ಕಾಪಾಡಲು ತುರ್ತು ಕ್ರಮ ವಹಿಸಬೇಕೆಂದು ಒತ್ತಾಯಿಸಿರುತ್ತಾರೆ.

**ಹೇಳಿಕೆ:** ಧಾರವಾಡ ಜಿಲ್ಲೆಯ ಅಣ್ಣಿಗೇರಿ ತಾಲ್ಲೂಕಿನ ನಾವಳ್ಳಿ,ಕುರಹಟ್ಟಿ,ಅಡ್ನೂರ,ಕಿತ್ತೂರು ಗ್ರಾಮಗಳ ಕುಡಿಯುವ ನೀರಿನ ಮೂಲಗಳ ನೀರಿನ ಗುಣಮಟ್ಟದ ಪರೀಕ್ಷೆಗಳನ್ನು ಕೈಗೊಳ್ಳಲಾಗಿದ್ದು, ಪ್ರಯೋಗಾಲಯಗಳ ವರದಿ ಪ್ರಕಾರ ಸದರಿ ಗ್ರಾಮಗಳಲ್ಲಿ ಯಾವುದೇ ನೀರಿನ ಮೂಲವು ಕಲುಷಿತಗೊಂಡಿರುವುದು ಕಂಡು ಬಂದಿರುವುದಿಲ್ಲ.

ಸದರಿ ಗ್ರಾಮಗಳಿಗೆ ಶುದ್ಧ ಕುಡಿಯುವ ನೀರನ್ನು ಒದಗಿಸಲು ಎಲ್ಲಾ ಗ್ರಾಮಗಳಲ್ಲಿ ಶುದ್ಧ ಕುಡಿಯುವ ನೀರಿನ ಘಟಕಗಳನ್ನು ಅಳವಡಿಸಲಾಗಿದ್ದು, ಇದಲ್ಲದೆ ಸದರಿ ಗ್ರಾಮಗಳಲ್ಲಿ ಬೂದು ನೀರು ಹಂದಿಗನ ಹಳ್ಳಕ್ಕೆ ಸೇರುವುದರಿಂದ ಕುಡಿಯುವ ನೀರಿನ ಜಲಮೂಲ ಕಲುಷಿತವಾಗಬಹುದೆಂದು ಸದರಿ ನಾವಳ್ಳಿ ಗ್ರಾಮ ಪಂಚಾಯತಿಯ ನಾವಳ್ಳಿ ಗ್ರಾಮದ ಹತ್ತಿರವಿರುವ ಹಂದಿಗನ ಹಳ್ಳಕ್ಕೆ ಕಲುಷಿತ ನೀರು ಸೇರದಂತೆ ಈಗಾಗಲೆ ರೂ.198.00 ಲಕ್ಷಗಳಿಗೆ ನಾವಳ್ಳಿ ಗ್ರಾಮಕ್ಕೆ ಬೂದು ನೀರು ನಿರ್ವಹಣೆ ಕಾಮಗಾರಿಯ ಅಂದಾಜು ಪತ್ರಿಕೆ ತಯಾರಿಸಿ ದಿನಾಂಕ: 23.02.2026 ರಂದು ಅನುಮೋದನೆ ಹಾಗೂ ಮುಂದಿನ ಸೂಕ್ತ ಕ್ರಮಕ್ಕಾಗಿ ಪ್ರಸ್ತಾವನೆಯನ್ನು ತಯಾರಿಸಲಾಗಿದೆ.

**(ಪ್ರಿಯಾಂಕ್ ಖರ್ಗೆ)**
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು
ಹಾಗೂ
ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು